ಘಟಕಗಳಲ್ಲಿನ ಸೀಟುಗಳಲ್ಲಿ 1/3 ಭಾಗದಷ್ಟು ಸೀಟುಗಳನ್ನು ಮಹಿಳೆಯರಿಗಾಗಿಯೇ ಮೀಸಲಿರಿಸಲಾಗಿದೆ.

ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ವಿವಿಧ ತಾಂತ್ರಿಕ ಮತ್ತು ತಾಂತ್ರಿಕೇತರ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದ್ದು, ಈ ತರಬೇತಿ ಪಡೆಯಲು ಕನಿಷ್ಟ 10ನೇ ತರಗತಿ ಉತ್ತೀರ್ಣರಾಗಿರಬೇಕು. ಕೇಂದ್ರ ಸರ್ಕಾರದ ನೆರವಿನೊಂದಿಗೆ ಅನುಷ್ಠಾನಗೊಳಿಸುತ್ತಿರುವ ಮಾಡ್ಯುಲಾರ್ ಎಂಪ್ಲಾಯಬಲ್ ಸ್ಕಿಲ್ ಕಾರ್ಯಕ್ರಮದಡಿಯಲ್ಲಿ ಮಹಿಳೆಯರಿಗೆ ಹೊಂದುವಂತಹ ಅನೇಕ ವೃತ್ತಿಗಳನ್ನು ಗುರುತಿಸಲಾಗಿದೆ. ಆದರೆ ಸದರಿ ವೃತ್ತಿಗಳಲ್ಲಿ ತರಬೇತಿ ಪಡೆಯಲು ಕನಿಷ್ಟ 5ನೇ ತರಗತಿ ಉತ್ತೀರ್ಣರಾಗಿರುವುದು ಕಡ್ಡಾಯವಾಗಿರುತ್ತದೆ. ಶಿಕ್ಷಣ ಪಡೆಯದ ಮಹಿಳೆಯರು ಮತ್ತು ಪ್ರಾಪ್ತ ವಯಸ್ಸಿನ ಮಕ್ಕಳಿಗೆ ಉದ್ಯೋಗ ಮತ್ತು ತರಬೇತಿ ಇಲಾಖೆಯು ಯಾವುದೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿರುವುದಿಲ್ಲ.

ಆದರೆ, ಒಂದು ವೇಳೆ ಈ ರೀತಿಯ ಬೇಡಿಕೆ ಬಂದಲ್ಲಿ ಹದಿನೆಂಟು ವರ್ಷ ಪೂರ್ಣಗೊಳಿಸಿದ ಮಹಿಳೆಯರಿಗೆ ಅವರು ಹೊಂದಿರುವ ಕೌಶಲ್ಯ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ವೃತ್ತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದಡಿ ವಿಶೇಷ ತರಬೇತಿ ಮತ್ತು ಸರ್ಟಿಫಿಕೇಟ್ ನೀಡುವ ಕಾರ್ಯಕ್ರಮದ ಬಗ್ಗೆ ಪರಿಶೀಲಿಸಲಾಗುವುದು.

ಆ) ಕೇಂದ್ರ ಸರ್ಕಾರದ ಅತ್ಯಂತ ಪರಿಣಾಮಕಾರಿ ಯೋಜನೆಯನ್ನು ಮಹಿಳೆಯರು ಪಡೆದುಕೊಳ್ಳುವಂತೆ ಅನುಕೂಲವಾಗಲು ರಾಜ್ಯ ಸರ್ಕಾರ ಆಸಕ್ತಿವಹಿಸಿ ಕ್ರಿಯಾ ಯೋಜನೆ ರೂಪಿಸಲು ಮುಂದಾಗುವುದೇ?

ಕೇಂದ್ರ ಸರ್ಕಾರದ ಯೋಜನೆಯ ಪ್ರಯೋಜನವನ್ನು ಮಹಿಳೆಯರು ಪಡೆದುಕೊಳ್ಳಲು ಅನುಕೂಲವಾಗುವಂತೆ ಕ್ರಿಯಾಯೋಜನೆಯನ್ನು ರೂಪಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಹಾಗಿದ್ದಲ್ಲಿ, ಕೇಂದ್ರದ ಯೋಜನೆಯನ್ನು ಮಹಿಳೆಯರು ಪರಿಣಾಮಕಾರಿಯಾಗಿ ಪಡೆಯಲು ಅನುಕೂಲವಾಗುವಂತೆ ಸರ್ಕಾರದ ಕ್ರಮಗಳೇನು? (ವಿವರ ನೀಡುವುದು)

ಮೇಲ್ಕಂಡ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಕಾಇ 13 ಇಟಿಎ 2009

(ಬಿ.ಎನ್.ಬಚ್ಚೇಗೌಡ)
ಕಾರ್ಮಿಕ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

341 ಶ್ರೀ ವಿಶ್ವನಾಥ್.ಎಸ್.ಆರ್ (ಯಲಹಂಕ)

ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

1) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ (ಬೆಂಗಳೂರು ನಗರ ಜಿಲ್ಲೆ) ಖಾಲಿ ಇರುವ ಸಿ ದರ್ಜೆ ಹುದ್ದೆಗಳೆಷ್ಟು (ದ್ವಿತೀಯ ದರ್ಜೆ ಸಹಾಯಕ ಮತ್ತು ತತ್ಸಮಾನ ಹುದ್ದೆಗಳು); ವಿವರ ನೀಡುವುದು?

ಕೃಷಿ ಮಾರಾಟ ಇಲಾಖೆಯಲ್ಲಿ (ಬೆಂಗಳೂರು ನಗರ ಜಿಲ್ಲೆ) ಖಾಲಿ ಇರುವ ಸಿ ದರ್ಜೆ ಹುದ್ದೆಗಳು (ದ್ವಿತೀಯ ದರ್ಜೆ ಸಹಾಯಕ ಮತ್ತು ತತ್ಸಮಾನ ಹುದ್ದೆಗಳು) ಒಟ್ಟು 19 ಇರುತ್ತವೆ. ವಿವರ ಈ ಕೆಳಕಂಡಂತಿದೆ;

ಕ್ರ. ಸಂ.	ಪದವ್ಯಂದ	ಖಾಲಿ ಹುದ್ದೆಗಳ ಸಂಖ್ಯೆ	ಒಟ್ಟು
	ಕೇಂದ್ರ ಕಛೇರಿ, ಬೆಂಗಳೂರು		
1.	ದ್ವಿತೀಯ ದರ್ಜೆ ಸಹಾಯಕರು	07	
2.	ಮಾರಾಟ ಸಹಾಯಕ(ಗ್ರೇಡರ್)	02	09
	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು		
1.	ದ್ವಿತೀಯ ದರ್ಜೆ ಸಹಾಯಕರು	07	
2.	ಮಾರಾಟ ಸಹಾಯಕ(ಗ್ರೇಡರ್)	02	09
	ಸಹಾಯಕ ನಿರ್ದೇಶಕರ ಕಛೇರಿ, ಬೆಂಗಳೂರು		
1.	ದ್ವಿತೀಯ ದರ್ಜೆ ಸಹಾಯಕ	01	01
	ಒಟ್ಟು		**19**

ಸಂಖ್ಯೆ: ಸಇ 51 ಮಾಇಹೇ 2009

ಸಹಿ/-

(ಶಿವರಾಜ್ ಎಸ್.ತಂಗಡಗಿ)

ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

(ಸಿ.ಕೆ.ವಾಸುದೇವ ಮೂರ್ತಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ